# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 960 |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ |
| ಉತ್ತರಿಸುವ ದಿನಾಂಕ | 20.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆ ದೇವಸ್ಥಾನಗಳು ಪ್ರಸ್ತುತ ಎಷ್ಟು ಎಕರೆ ಭೂಮಿಯನ್ನು ಹೊಂದಿದೆ. (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ 34,566 ಅಧಿಸೂಚಿತ ದೇವಸ್ಥಾನಗಳು ಪ್ರಸ್ತುತ 37452 ಎಕರೆ 28.8 ಗುಂಟೆ ವಿಸ್ತೀರ್ಣದ ಜಾಗವನ್ನು ಹೊಂದಿದ್ದು, ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳು/ಸಂಸ್ಥೆಗಳ ಬಹುತೇಕ ಜಮೀನುಗಳು ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆಗಳಡಿಯಲ್ಲಿ ಸರ್ಕಾರದಲ್ಲಿ ವಿಹಿತವಾಗಿರುತ್ತದೆ. ಇನ್ನೂ ಹೆಚ್ಚಿನ ಜಮೀನುಗಳು ಅನೇಕ ಕಾರಣಗಳಿಂದ ಹಲವಾರು ನ್ಯಾಯಾಲಯಗಳಲ್ಲಿ ಭೂಸುಧಾರಣ ಟ್ರಿಬ್ಯೂನಲ್‌ಗಳಲ್ಲಿ, ಸಿವಿಲ್ ವ್ಯಾಜ್ಯಗಳಲ್ಲಿ, ಭೂಸ್ವಾಧೀನ ಪ್ರಕರಣಗಳಲ್ಲಿ ಖಾಸಗಿ ತಕರಾರುಗಳಲ್ಲಿ ಸಿಲುಕಿರುವುದರಿಂದ ಇತ್ಯರ್ಥವಾಗದೇ ನಿಖರ ಮಾಹಿತಿ ಪಡೆಯುವುದು ಕಷ್ಟಸಾಧ್ಯವಾಗಿರುತ್ತದೆ. ಆದರೂ ವಿವರಗಳನ್ನು ಸಮನ್ವಯ ಮಾಡಿಕೊಳ್ಳಲಾಗುತ್ತಿದೆ.<br><br>ಈ ರೀತಿ ಸರ್ಕಾರದಲ್ಲಿ ವಿಹಿತವಾಗಿರುವ ಜಮೀನುಗಳನ್ನು ಹೊರತುಪಡಿಸಿ, ದೇವಾಲಯಕ್ಕೆ ಸೇರಿದ ಉಳಿದೆಲ್ಲ ಜಮೀನುಗಳನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>2025ನೇ ಸಾಲಿನ ಜುಲೈ ಅಂತ್ಯದವರೆಗೆ 20730 ದೇವಾಲಯ/ದೇವಾಲಯದ ಆಸ್ತಿಗಳ ಖಾತೆ ಇಂಡೀಕರಿಸಲಾಗಿದ್ದು, 23793 ಸ್ಥಿರಾಸ್ತಿಗಳನ್ನು ದೇವಾಲಯದ ಹೆಸರಿಗೆ ಖಾತೆ ಮಾಡಲು ಬಾಕಿ ಇರುತ್ತದೆ.<br><br>ಬಾಕಿ ಉಳಿದ ಆಸ್ತಿಗಳನ್ನು ಪಹಣಿಯಲ್ಲಿ ತ್ವರಿತವಾಗಿ ಇಂಡೀಕರಣ ಮಾಡುವಂತೆ ಜಿಲ್ಲೆಯ ಜಿಲ್ಲಾಧಿಕಾರಿಗಳ/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಆ) | ಶ್ರೀಮತಿ ದ್ವಾರಕ ಬಾಯಿ ವೇದಾಂತಂ ರವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನ ಹಳ್ಳಿ ಪೆದ್ದನಹಳ್ಳಿ, ದೊಡ್ಡಮಾರನ ಹಳ್ಳಿ, ಮತ್ತು ಕಾಡುಮಾರನಹಳ್ಳಿಯ 1198.34 ಎಕರೆ | ಶ್ರೀಮತಿ ದ್ವಾರಕ ಬಾಯಿ ವೇದಾಂತರವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನ ಹಳ್ಳಿ, ಮತ್ತು ಕಾಡುಮಾರನಹಳ್ಳಿಯ 1198.34 ಎಕರೆ ಜಾಗವನ್ನು (ಖರಾಬು ಒಳಗೊಂಡಂತೆ) 11/13ನೇ ಏಪ್ರಿಲ್ 1939 ರಂದು ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥ ಸ್ವಾಮಿ ದೇವಾಲಯಕ್ಕೆ ದಾನವಾಗಿ ನೀಡಿರುತ್ತಾರೆ.<br><br>ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಆಸ್ತಿಗಳನ್ನು, ಸರ್ಕಾರದ ಆದೇಶ ಸಂಖ್ಯೆ:2170-4 MUZ 383-39-4 ದಿನಾಂಕ:26-02-1941ರನ್ವಯ ಸದರಿ ಆಸ್ತಿಗಳಿಂದ ಬರುವ ನಿವ್ವಳ ಆದಾಯವನ್ನು ಈ ಕೆಳಕಂಡ ಉದ್ದೇಶಗಳಿಗೆ ಉಪಯೋಗಿಸಬೇಕೆಂದು ಸರ್ಕಾರದ ಆದೇಶದಿಂದ ಕಂಡು ಬಂದಿರುತ್ತದೆ. |

| ಪ್ರಶ್ನೆ | ಉತ್ತರ |
|---|---|

**ಪ್ರಶ್ನೆ**

ಜಾಗವನ್ನು 11/13ನೇ ಏಪ್ರಿಲ್ 1939 ರಂದು ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸದರಿ ಜಾಗವನ್ನು ಯಾವ ಕಾರಣಕ್ಕಾಗಿ ದಾನವಾಗಿ ನೀಡಲಾಗಿದೆ; ಪ್ರಸ್ತುತ ಎಷ್ಟು ಎಕರೆ ಜಾಗ ದೇವಾಲಯದ ಹೆಸರಿನಲ್ಲಿದೆ; ಅನಧಿಕೃತವಾಗಿ ಒತ್ತುವರಿಯಾದ ಜಾಗವೆಷ್ಟು; (ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿ ನೀಡುವುದು)

**ಉತ್ತರ**

1. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ತುಲಾ ಮಾಸದಲ್ಲಿ ನಡೆಯುವ ಪೂಜಾ ಕೈಂಕರ್ಯಗಳ ಸಂದರ್ಭದಲ್ಲಿ ಆಗಮಿಸುವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಗಾಗಿ ಈ ಆಸ್ತಿಗಳ ಒಟ್ಟು ಆದಾಯದ 1/3 ಭಾಗವನ್ನು ಉಪಯೋಗಿಸತಕ್ಕದ್ದು.
2. ಉಳಿದ ಹಣವನ್ನು ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುವ ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು ಆರೋಗ್ಯದ ಮಾಹಿತಿಗಳನ್ನು ಪಸರಿಸುವ ಬಗ್ಗೆ ಮತ್ತು ಶುಚಿತ್ವದ ಅಭ್ಯಾಸವನ್ನು ಬೆಳೆಸುವ ಸಂಬಂಧ ಅಂತಹ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ಕೊಡತಕ್ಕದ್ದು.

ಪ್ರಸ್ತಾಪಿತ 1198.34 ಎಕರೆ/ಗುಂಟೆ ಜಾಗದ ಕುರಿತು (ಖರಾಬು ಒಳಗೊಂಡಂತೆ) ಎಲ್ಲಾ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಟ್ಟು 13 ಮಂದಿ ಸದಸ್ಯರನ್ನು ಒಳಗೊಂಡಂತೆ ಸರ್ಕಾರದ ಆದೇಶ ಸಂಖ್ಯೆ: ಕಂಇ 98 ಮುಆಬಿ 2021, ದಿನಾಂಕ:28-09-2021 & ದಿನಾಂಕ:11-11-2021ರ ಆದೇಶದಲ್ಲಿ ಸಮಿತಿ ರಚಿಸಲಾಗಿರುತ್ತದೆ.

- ಚೋಳನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 56 ರಿಂದ 63ರ ವರೆಗಿನ ಜಮೀನುಗಳ ಒಟ್ಟು ವಿಸ್ತೀರ್ಣ 287-09 ಎಕರೆ/ಗುಂಟೆ ಆಗಿರುತ್ತದೆ. ಸದರಿ ಜಮೀನುಗಳನ್ನು TOTAL STATION SURVEY ನಡೆಸಿ ನಕ್ಷೆಯಲ್ಲಿ ಖಾತೆದಾರರು ಅನುಭವದಲ್ಲಿರುವಂತೆ ಗುರುತಿಸಿದ್ದು ಒತ್ತುವರಿದಾರ ವಿಸ್ತೀರ್ಣ 38.07 ಎಕರೆ/ಗುಂಟೆ ಖರಾಬು 0-34.08 ಎಕರೆ/ಗುಂಟೆ ಉಳಿಕೆ 37-12.08 ಎಕರೆ/ಗುಂಟೆ ಆಗಿದ್ದು ಒತ್ತುವರಿದಾರರ ವಿವರವನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.
- ಧಾರ್ಮಿಕ ದತ್ತಿ ಆಯುಕ್ತರ ಘನ ಅಧ್ಯಕ್ಷತೆಯಲ್ಲಿ ಒಟ್ಟು 14 ಸಮಿತಿಯ ಸಭೆಗಳನ್ನು ನಡೆಸಲಾಗಿರುತ್ತದೆ. ಸದರಿ ಸಭೆಯ ನಡವಳಿಯ ನಿರ್ಣಯದಂತೆ ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಲ್ಲಿಸಿದ ಕಂದಾಯ ದಾಖಲೆಗಳಲ್ಲಿ ಭೂಮಿಯ ತಂತ್ರಾಂಶದಂತೆ ಒಟ್ಟು 155-22 ಎ/ಗು ವಿಸ್ತೀರ್ಣದ ಜಮೀನು ಶ್ರೀ ರಂಗಪಟ್ಟಣ ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನಲ್ಲಿ ಪಹಣಿ ಇರುವುದಾಗಿ ಕಂಡು ಬಂದಿದ್ದು, ಸದರಿ ದಾಖಲೆಗಳಲ್ಲಿ ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನ ಬದಲಾಗಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಹೆಸರನ್ನು ಆರ್.ಟಿ.ಸಿ ಯಲ್ಲಿ ಮತ್ತು ಭೂ ದಾಖಲೆಗಳಲ್ಲಿ ದಾಖಲಿಸಲು ತಹಸೀಲ್ದಾರ್, ದಕ್ಷಿಣ ತಾಲ್ಲೂಕು ರವರಿಗೆ ಸೂಚನೆ ನೀಡಲಾಗಿರುತ್ತದೆ.

| | | | |
|---|---|---|---|
| 1. | ಚೋಳನಾಯಕನಹಳ್ಳಿ | 57 | 32-12 |
| 2. | ಚೋಳನಾಯಕನಹಳ್ಳಿ | 58 | 1-13 |
| 3. | ಚೋಳನಾಯಕನಹಳ್ಳಿ | 59 | 59-25 |
| 4. | ಚೋಳನಾಯಕನಹಳ್ಳಿ | 60 | 0-17 |
| 5. | ಚೋಳನಾಯಕನಹಳ್ಳಿ | 61 | 26-36 |
| 6. | ಚೋಳನಾಯಕನಹಳ್ಳಿ | 62 | 4-32 |
| 7. | ಚೋಳನಾಯಕನಹಳ್ಳಿ | 63 | 30-07 |
| ಒಟ್ಟು | | | 155-22 |

- ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನ ಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕುರುಬರಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಅನಧಿಕೃತ ವಾಗಿ

| ಪ್ರಶ್ನೆ | ಉತ್ತರ |
|---|---|

ಒತ್ತುವರಿಯಾಗಿರುವ ಬಗ್ಗೆ ಕರ್ನಾಟಕ ಭೂಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ 44/16-17, 46/16-17, 47/16-17, 45/16-17, 15/16-17 ರಂತೆ ಸ್ವಯಂ ಪ್ರಕರಣಗಳು ದಾಖಲಾಗಿರುತ್ತದೆ. ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹ ಡಬ್ಲ್ಯೂ.ಪಿ.13564/2019ರಂತೆ ಪ್ರಕರಣ ದಾಖಲಾಗಿ ರುವುದರಿಂದ ಸದರಿ ಪ್ರಕರಣಗಳು ವಿಚಾರಣಾ ಹಂತ ದಲ್ಲಿರುತ್ತವೆ.

- ದಾನವಾಗಿ ನೀಡಿರುವ ಪೆದ್ದನಪಾಳ್ಯ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಜಮೀನುಗಳ ಒಟ್ಟು ವಿಸ್ತೀರ್ಣ 266-26 ಎಕರೆ/ಗುಂಟೆ ಆಗಿರುತ್ತದೆ. ಸದರಿ ಜಮೀನುಗಳ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.
- ಬ್ಯಾಲಾಳು ಗ್ರಾಮಕ್ಕೆ ಸೇರಿದ ವಿವಿದ ಸರ್ವೆ ನಂಬರ್ 47, 51 ಮತ್ತು 53 ರ ಜಮೀನುಗಳ ಒಟ್ಟು ವಿಸ್ತೀರ್ಣ ಡೀಡ್‌ನಂತೆ 195-00ಎಕರೆ (ಖರಾಬು/ಖುಷ್ಕಿ ಒಳಗೊಂಡಂತೆ)ಗಳಾಗಿದ್ದು ಸರ್ವೆ ಆಗಿರುತ್ತದೆ.

**ಬ್ಯಾಲಾಳು ಗ್ರಾಮದ ಜಮೀನಿನ ವಿವರ ಪೋಷ್ವಾರೆ (ಆಕಾರ್ ಬಂದಿನಂತೆ) ಈ ಕೆಳಕಂಡಂತಿದೆ:-**

| ಕ್ರ.ಸಂ | ವಿವರ | ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ ಎಕರೆ/ಗುಂಟೆ |
|---|---|---|---|
| 1 | ಸರ್ವೆ ನಂಬರ್ 47ರಲ್ಲಿ 47/1 ರಿಂದ 47/82 | 31-01 | ಕೆ.ಹೆಚ್.ಬಿಗೆ ಭೂ ಸ್ವಾಧೀನ |
| 2 | ಸರ್ವೆ ನಂಬರ್ 51 | 45-00 | ಬಾಹ್ಯಾಕಾಶಕ್ಕೆ ಭೂ ಸ್ವಾಧೀನ |
| 3 | ಸರ್ವೆ ನಂಬರ್ 53 | 6-30 | ಎಲ್ ಆರ್ ಎಫ್ ಮಂಜೂರಿ |
| 4 | ಸರ್ವೆ ನಂಬರ್ 53 | 21-17 | ಉಪವಿಭಾಗಾಧಿಕಾರಿ ಗಳಿಗೆ 136(2) ರಡಿ ಮೇಲ್ಮನವಿ ಸಲ್ಲಿಸುವ ವಿಸ್ತೀರ್ಣ |
| 5 | ಸರ್ವೆ ನಂಬರ್ 53 | 9-15 | ಭೂಪರಿವರ್ತನೆ ಯಾಗಿರುವ ವಿಸ್ತೀರ್ಣ |
| **Grand Total** | | **113-23** | |

- ದೊಡ್ಡಮಾರನಹಳ್ಳಿ ಗ್ರಾಮದ ಸರ್ವೆ ನಂಬರ್: 28, 29, 30, ಮತ್ತು 32ರ ಜಮೀನುಗಳ ಒಟ್ಟು ವಿಸ್ತೀರ್ಣ 88-36 ಎಕರೆ/ಗುಂಟೆ ಆಗಿದ್ದು ಸರ್ವೆ ಕಾರ್ಯ ಪ್ರಗತಿ ಯಲ್ಲಿರುತ್ತದೆ. ಭಾಗಶಃ ಭೂ ಪರಿವರ್ತನೆಯಾಗಿ ಮನೆಗಳಾಗಿರುವುದು ಕಂಡು ಬಂದಿರುತ್ತದೆ.
- ಕಾಡುಮಾರೇನಹಳ್ಳಿ (ಕುರುಬರಹಳ್ಳಿ) ಗ್ರಾಮದ ವಿವಿದ ಸರ್ವೆ ನಂಬರ್‌ಗಳ ಜಮೀನುಗಳ ಒಟ್ಟು ವಿಸ್ತೀರ್ಣ ಡೀಡ್‌ನಂತೆ 361-03 ಎಕರೆ/ಗುಂಟೆ (ಖರಾಬು/ಖುಷ್ಕಿ ಒಳಗೊಂಡಂತೆ) ಗಳಾಗಿರುತ್ತದೆ. ಜಮೀನಿಗಳಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯವಾಗಿದ್ದು, ಪೂರ್ಣ ಜಮೀನು ಭೂ ಪರಿವರ್ತನೆಯಾಗಿ ಮನೆಗಳಾಗಿ ರುವುದು ಕಂಡು ಬಂದಿರುತ್ತದೆ.
- ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳ ಜಮೀನುಗಳನ್ನು TOTAL STATION SURVEY ಮಾಡುವ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಸರ್ವೆ ಕಾರ್ಯ ಮುಗಿದ ನಂತರ ಒತ್ತುವರಿದಾರರ ವಿವರ ಲಭ್ಯವಾಗಲಿದೆ.

| | |
|---|---|
| ಇ) ದೇವಸ್ಥಾನಕ್ಕೆ, ದಾನವಾಗಿ ನೀಡಿರುವ ಜಾಗವನ್ನು ಸರ್ಕಾರ ಯಾವ ಆದೇಶದ ಅನ್ವಯ 79 | ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದ ಸಂಖ್ಯೆ:ಆರ್.ಡಿ 238 ಎಲ್.ಜಿ.ಬಿ 79 ದಿನಾಂಕ:25/06/1982ರ ಆದೇಶದಂತೆ ತಹಶೀಲ್ದಾರ್ ಮಾಗಡಿ ತಾಲ್ಲೂಕುರವರ ಅಧಿಕೃತ ಜ್ಞಾಪನ ಪತ್ರದ ಆದೇಶದ ಸಂಖ್ಯೆ:ಎಲ್.ಎನ್.ಡಿ/ಸಿಆರ್/53/82-83 ದಿನಾಂಕ:13/07/1982ರಂತೆ ಮತ್ತು |

| | ಪ್ರಶ್ನೆ | ಉತ್ತರ |
|---|---|---|
| | ನಿರಾಶ್ರಿತರಿಗೆ ತಲಾ 2.2 ಎಕರೆ ಜಮೀನು ಮಂಜೂರು ಮಾಡಿದೆ; ಈ ಜಮೀನನ್ನು ಸರ್ಕಾರಕ್ಕೆ ದಾನವಾಗಿ ನೀಡಲಾಗಿತ್ತೇ; ಸರ್ಕಾರಕ್ಕೆ ದಾನ ನೀಡಿಲ್ಲವೆಂದಾಗ, ಸರ್ಕಾರ ಹೇಗೆ ದೇವಸ್ಥಾನದ ಜಾಗವನ್ನು ಹಂಚಲು ಸಾಧ್ಯ; ದೇವಸ್ಥಾನಕ್ಕೆ ದಾನ ನೀಡಿದ ಜಮೀನನ್ನು ಸ್ವಾಧೀನಪಡಿಸಿ ಇತರರಿಗೆ ಹಂಚುವಾಗ ದೇವಸ್ಥಾನಕ್ಕೆ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಿದೆ; (ವಿವರ ನೀಡುವುದು) | ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:ಎಲ್‌ಎನ್.ಡಿ/ಎಸ್‌ಆರ್/466/1986-87 ದಿ:27/05/1989ರಂತೆ ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ 79 ನಿರಾಶ್ರಿತರಿಗೆ ಚೋಳನಾಯಕ ನಹಳ್ಳಿ ಗ್ರಾಮದ ಸ.ನಂ 57 ರಿಂದ 63 ರವರೆಗೆ ತಲಾ 2-20 ಎಕರೆ/ಗುಂಟೆಯಂತೆ ಬದಲಿ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.<br><br>ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದಂತೆ ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಬದಲಿ ಜಮೀನನ್ನು ನೀಡುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1964 ರಡಿ ಮಂಜೂರು ಮಾಡಲಾಗಿರುತ್ತದೆ. ಹಾಗೂ ಇನಾಂ ಅಬಾಲಿಷನ್ ಕಾಯ್ದೆ/ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ಕಾಯ್ದೆಗಳನ್ವಯ ಮಂಜೂರು ಮಾಡಲಾಗಿರುತ್ತದೆ. ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಜಮೀನು ಮಂಜೂರಾಗಿರುವ ಕುರಿತು ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಸಲಾದ ಸಮಿತಿಯ ಸಭೆಯಲ್ಲಿ ಹೀಗೆ ನಿರಾಶ್ರಿತರಿಗೆ ಮಂಜೂರಾಗಿರುವ ಆದೇಶಗಳನ್ನು ಕ್ರೋಢೀಕರಿಸಿ ಪೂರ್ಣ ವಿವರಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಪರ ಜಿಲ್ಲಾಧಿಕಾರಿಗಳು ಮತ್ತು ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚನೆ ನೀಡಲಾಗಿರುತ್ತದೆ. |
| ಈ) | ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ 13 ಜನರ ಸಮಿತಿಯು 11.11.2021 ರಿಂದ ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ; ಎಷ್ಟು ಅನಧಿಕೃತ ಒತ್ತುವರಿದಾರರನ್ನು ಗುರುತಿಸಿದೆ?' (ವಿವರ ನೀಡುವುದು) | ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ 13 ಜನರ ಸಮಿತಿಯು ಕಾಲಕಾಲಕ್ಕೆ ದಿನಾಂಕ:11-11-2021, 18-11-2021, 13-03-2024 16-05-2024, 10-06-2024, 21-06-2024,31-07-2024, 01-10-2024, 31-12-2024 15-01-2025, 17-02-2025, 16-04-2025, 10-07-2025, ಹಾಗೂ ದಿನಾಂಕ:05-08-2025 ಹೀಗೆ ಒಟ್ಟು 14 ಸಭೆಗಳನ್ನು ನಡೆಸಲಾಗಿರುತ್ತದೆ.<br><br>ಚೋಳನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 56 ರಿಂದ 63ರ ವರೆಗಿನ ಜಮೀನುಗಳನ್ನು TOTAL STATION SURVEY ನಡೆಸಿ ನಕ್ಷೆಯಲ್ಲಿ ಖಾತೆದಾರರು ಅನುಭವದಲ್ಲಿರುವಂತೆ ಗುರುತಿಸಿದ್ದು, ಒತ್ತುವರಿದಾರ ವಿಸ್ತೀರ್ಣ 38.07 ಎಕರೆ/ಗುಂಟೆ ಖರಾಬು 0-34.08 ಎಕರೆ/ಗುಂಟೆ ಉಳಿಕೆ 37-12.08 ಎಕರೆ/ಗುಂಟೆ ಆಗಿದ್ದು, ಒಟ್ಟು 23 ಜನ ಒತ್ತುವರಿದಾರರನ್ನು ಗುರುತಿಸಲಾಗಿದೆ. ಒತ್ತುವರಿದಾರರ ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ.<br><br>ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕುರುಬರಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ಒತ್ತುವರಿ ಯಾಗಿರುವ ಬಗ್ಗೆ ಕರ್ನಾಟಕ ಭೂಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ 44/16-17, 46/16-17, 47/16-17 45/16-17, 15/16-17ರಂತೆ ಸ್ವಯಂ ಪ್ರಕರಣಗಳು ದಾಖಲಾಗಿರುತ್ತದೆ. ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹ ಡಬ್ಲೂ.ಪಿ.13564/2019ರಂತೆ ಪ್ರಕರಣ ದಾಖಲಾಗಿರುವುದರಿಂದ ಮಾನ್ಯ ಘನ ನ್ಯಾಯಾಲಯದ ಆದೇಶದಂತೆ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ಕಂಇ 185 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ – 1

## ಮುಜರಾಯಿ ದೇವಾಲಯಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಮುಜರಾಯಿದೇವಾಲಯಗಳಸಂಖ್ಯೆ | | | | | ದೇವಾಲಯ ಆಸ್ತಿಗಳ ಒಟ್ಟು ವಿಸ್ತೀರ್ಣ | | | | | | ಒಟ್ಟು | |
|---|---|---|---|---|---|---|---|---|---|---|---|---|---|---|
| | | ಜಿಲ್ಲೆಯಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ | A | B | C | ಒಟ್ಟು ದೇವಾಲಯಗಳ ಸಂಖ್ಯೆ | A | | B | | C | | | |
| | | | | | | | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎ | ಗು |
| 1 | ಬೆಂಗಳೂರು ನಗರ | 5 | 21 | 16 | 1067 | **1104** | 114 | 10.5 | 59 | 18.25 | 432 | 19.5 | 605 | 48.25 |
| 2 | ಬೆಂಗಳೂರು ಗ್ರಾಮಾಂತರ | 4 | 3 | 5 | 1132 | **1140** | 907 | 18.75 | 48 | 32.5 | 298 | 29 | 1253 | 80.25 |
| 3 | ರಾಮನಗರ | 4 | 7 | 5 | 855 | **867** | 98 | 37.75 | 60 | | 843 | 25 | 1001 | 62.75 |
| 4 | ಚಿಕ್ಕಬಳ್ಳಾಪುರ | 8 | 3 | 4 | 1065 | **1072** | 36 | 18 | 198 | 10 | 973 | 10.25 | 1207 | 38.25 |
| 5 | ತುಮಕೂರು | 10 | 9 | 10 | 2442 | **2461** | 170 | 37.5 | 124 | 1 | 4068 | 28.5 | 4362 | 67 |
| 6 | ಕೋಲಾರ | 6 | 6 | 7 | 1315 | **1328** | 39 | 14.25 | 254 | 0.75 | 1098 | 24.25 | 1391 | 39.25 |
| 7 | ಚಿತ್ರದುರ್ಗ | 6 | 4 | 4 | 297 | **305** | 160 | 2 | 9 | 12 | 890 | 39 | 1059 | 53 |
| 8 | ಶಿವಮೊಗ್ಗ | 7 | 4 | 2 | 637 | **643** | 289 | 29 | 3 | 20 | 898 | 34 | 1190 | 83 |
| 9 | ದಾವಣಗೆರೆ | 6 | 2 | 8 | 611 | **621** | 10 | 17 | 63 | 38.25 | 249 | 38.75 | 322 | 94 |
| 10 | ಮೈಸೂರು | 9 | 6 | 4 | 1301 | **1311** | 121 | 2 | 370 | 31.25 | 1119 | 39 | 1610 | 72.25 |
| 11 | ಮಂಡ್ಯ | 7 | 9 | 13 | 2099 | **2121** | 163 | 33 | 28 | 32 | 2292 | 17.5 | 2483 | 82.5 |
| 12 | ದಕ್ಷಿಣ ಕನ್ನಡ | 9 | 45 | 35 | 415 | **495** | 848 | 26 | 57 | 12.25 | 366 | 94 | 1271 | 132.3 |
| 13 | ಚಿಕ್ಕ ಮಗಳೂರು | 9 | 3 | 9 | 868 | **880** | 23 | 31.5 | 82 | 37 | 680 | 38 | 785 | 106.5 |
| 14 | ಚಾಮರಾಜನಗರ | 5 | 2 | 1 | 411 | **414** | 98 | 22.25 | 5 | 12.5 | 396 | 28 | 499 | 62.75 |
| 15 | ಕೊಡಗು | 5 | 3 | | 4 | **7** | 343 | 3.5 | 0 | 0 | 312 | 17 | 655 | 20.5 |
| 16 | ಹಾಸನ | 8 | 6 | 6 | 2444 | **2456** | 27 | 31 | 92 | 20.5 | 2256 | 21.25 | 2375 | 72.75 |
| 17 | ಉಡುಪಿ | 7 | 25 | 9 | 775 | **809** | 234 | 12 | 14 | 24 | 462 | 20 | 710 | 56 |
| 18 | ಗುಲ್ಬರ್ಗಾ | 11 | 4 | 2 | 1624 | **1630** | 173 | 8 | 73 | 2 | 1374 | 27 | 1620 | 37 |
| 19 | ಯಾದಗಿರಿ | 6 | 2 | 3 | 1207 | **1212** | 7 | 13 | 10 | 3 | 473 | 32.5 | 490 | 48.5 |
| 20 | ಬಳ್ಳಾರಿ | 5 | 4 | 4 | 653 | **661** | 64 | 25 | 6 | 29 | 853 | 35 | 923 | 89 |
| 21 | ವಿಜಯನಗರ | 6 | 10 | 7 | 621 | **638** | 588 | 37 | 37 | 26 | 2598 | 1.5 | 3223 | 64.5 |
| 22 | ರಾಯಚೂರು | 7 | 4 | 1 | 1282 | **1287** | 1044 | 21 | 5 | 6 | 202 | 14 | 1251 | 41 |
| 23 | ಕೊಪ್ಪಳ | 7 | 3 | 0 | 736 | **739** | 71 | 34 | | | 462 | 25 | 533 | 59 |
| 24 | ಬೀದರ್ | 8 | 7 | 3 | 520 | **530** | 142 | 7 | 49 | 18 | 334 | 22 | 525 | 47 |
| 25 | ಬೆಳಗಾವಿ | 15 | 5 | 6 | 3795 | **3806** | 1820 | 21.75 | 2 | 7 | 1534 | 10 | 3356 | 38.75 |
| 26 | ಬಾಗಲಕೋಟೆ | 9 | | 2 | 1164 | **1166** | 0 | 0 | 2 | 33 | 407 | 0.25 | 409 | 33.25 |
| 27 | ಉತ್ತರ ಕನ್ನಡ | 12 | 9 | 8 | 684 | **701** | 38 | 10.5 | 90 | 11.75 | 370 | 29 | 498 | 51.25 |
| 28 | ಹಾವೇರಿ | 8 | 1 | 11 | 1279 | **1291** | 2 | 38 | 7 | 14 | 735 | 37 | 744 | 89 |

| ಕ್ರಮ ಸಂಖ್ಯೆ | ಜಿಲ್ಲೆ | ಜಿಲ್ಲೆಯಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ | A | B | C | ಒಟ್ಟು ದೇವಾಲಯಗಳ ಸಂಖ್ಯೆ | A | | B | | C | | ಒಟ್ಟು | |
|---|---|---|---|---|---|---|---|---|---|---|---|---|---|---|
| 29 | ವಿಜಯಪುರ | 13 | | 1 | 550 | **551** | 0 | 0 | 4 | 0 | 142 | 11.5 | 146 | 11.5 |
| 30 | ಗದಗ್ | 7 | | | 1388 | **1388** | 0 | 0 | 0 | 0 | 762 | 4 | 762 | 4 |
| 31 | ಧಾರವಾಡ | 8 | | | 930 | **930** | 0 | 0 | 0 | 0 | 150 | 4 | 150 | 4 |
| | | **237** | **207** | **186** | **34171** | **34564** | **7643** | **1** | **1762** | **12** | **28047** | **15.8** | **37452** | **28.8** |
| | ಮೂಲ: ಜಿಲ್ಲಾಧಿಕಾರಿಗಳ ಕಚೇರಿಯಿಂದ ಸ್ವೀಕೃತವಾದಂತೆ ಕ್ರೋಢೀಕರಿಸಿದ ಮಾಹಿತಿ | | | | | | | | | | | | | |

K. Padma

ಆಯುಕ್ತರ ಪರವಾಗಿ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ,
ಚಾಮರಾಜ ಪೇಟೆ, ಬೆಂಗಳೂರು -18.

ಅನುಬಂಧ-2

ಚೋಳನಾಯಕನಹಳ್ಳಿ ಗ್ರಾಮದ ಸನಂ 56 ರಿಂದ 63 ರವರೆಗಿನ ಜಮೀನುಗಳಿದ್ದು ಈ ಪೈಕಿ ಅನಧಿಕೃತ ಒತ್ತುವರಿದಾರರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸ | ಸ.ನಂ | ಬ್ಲಾಕ್ ನಂ | ಜಂಟಿ ಅಳತೆಯಂತೆ ಅನುಭವದಾರರ ಹೆಸರು/ಒತ್ತುವರಿದಾರರು | ಐನ್ ಎ/ಗು | ಖರಾಬು | ಬಾಕಿ ಎ/ಗು |
|---|---|---|---|---|---|---|
| 1 | 56 | 02 | ರತ್ನಮ್ಮ ಕೋಂ ನಾಗರಾಜು, ರತ್ನಮ್ಮ ಕೋಂಸೂರ್ಯನಾರಾಯಣ | 2-13 | - | 2-13 |
| 2 | 56 | 03 | ವೀರಪ್ಪ ಬಿನ್ ಮಾದಯ್ಯ | 0-30 | - | 0-30 |
| 3 | 56 | 04 | ಜಯಮ್ಮ ಕೋಂ ನಾಗರಾಜಯ್ಯ | 2-09 | - | 2-09 |
| 4 | 56 | 05 | ನಾಗಯ್ಯ ಬಿನ್ ಸಿದ್ದಯ್ಯ | 1-29 | - | 1-29 |
| 5 | 56 | 06 | ಪುಟ್ಟಮ್ಮ | 1-11 | - | 1-11 |
| 6 | 56 | 07 | ವೆಂಕಟಪ್ಪ | 1-06 | - | 1-06 |
| 7 | 56 | 08 | ಹನುಮಂತರಾಜು ಬಿನ ಬೈಲಪ್ಪ | 3-08 | 0-09 | 3-08 |
| 8 | 56 | 09 | ನರಸಿಂಹಮೂರ್ತಿ ಬಿನ್ ವೆಂಕಟರಮಣ | 2-31 | 0-10 | 2-21 |
| 9 | 56 | 10 | ತಿಮ್ಮಯ್ಯ ಬಿನ್ ವೆಂಕಟರಮಣಯ್ಯ | 2-09 | 0-09 | 2-00 |
| 10 | 56 | 11 | ಹೊನ್ನಯ್ಯ ಬಿನ್ ಲೇ\|\| ತಿಮ್ಮರಾಯಪ್ಪ | 2-09 | - | 2-09 |
| 11 | 56 | 12 | ವೆಂಕಟರಂಗಯ್ಯ ಬಿನ್ ವೆಂಕಟರಾಮಯ್ಯ | 0-24 | - | 0-24 |
| 12 | 56 | 13 | ವರಲಕ್ಷ್ಮಿ ಬಿನ್ ರಾಮಯ್ಯ | 0-24 | - | 0-24 |
| 13 | 56 | 14 | ಸರಸಮ್ಮ ಕೋಂ ನಂಜಪ್ಪಪ | 0-24 | - | 0-24 |
| 14 | 56 | 15 | ರಾಜು ಬಿನ್ ನಂಜಪ್ಪ | 0-11 | - | 0-11 |
| 15 | 56 | 16 | ನಾರಾಯಣಪ್ಪ ಬಿನ್ ನರಸಿಂಹಯ್ಯ | 0-05 | - | 0-05 |
| | | | **ಒಟ್ಟು** | 22-03 | 0-28 | 21-15 |
| 16 | 59 | 15 | ಶಂಕರ್ | 2-20 | - | 2-20 |
| 17 | 59 | 04 | ಲಕ್ಷ್ಮೀ ನರಸಿಂಹಯ್ಯ ಬಿನ್ ಲೇ\|\| ತಿಮ್ಮಪ್ಪ | 2-20 | - | 2-20 |
| | | | **ಒಟ್ಟು** | 5-00 | - | 5-00 |
| 18 | 62 | 01 | ದೊಡ್ಡಕೆಂಪಯ್ಯ ಬಿನ್ ವೆಂಕಟಯ್ಯ | 2-04 | 0-2-12 | 2-1-04 |
| 19 | 62 | 04 | ಮಾರಯ್ಯಯ ಬಿನ್ ಸಿದ್ದಯ್ಯ | 2-20 | 0-3-12 | 2-16.04 |
| | | | ಒಟ್ಟು | 4-24 | 0-06-08 | 4-17.08 |
| 20 | 63 | 06 | ಕರಿಯಪ್ಪ | 2-20 | - | 2-20 |
| 21 | 63 | 09 | ಪುಟ್ಟಮ್ಮ | 0-30 | - | 0-30 |
| 22 | 63 | 10 | ವೆಂಕಟರಮಣ | 0-30 | - | 0-30 |
| 23 | 63 | ಖಾತೆದಾರರು | ರಂಗನಾಥ ಸಂಪತ್ನ್ ಬಿನ್ ಸಂಪಂತ್ ಕುಮಾರ್ | 2-20 | - | 2-20 |
| | | | **ಒಟ್ಟು** | 6-20 | - | 6-20 |
| | | | 23 ಒತ್ತುವರಿದಾರರ ಒಟ್ಟು ವಿಸ್ತೀರ್ಣ | 38-07 | 0-34.08 | 37-12.08 |

ತಹಶೀಲ್ದಾರ್
ಬೆಂಗಳೂರು ದಕ್ಷಿಣ ತಾಲ್ಲೂಕು
ಬೆಂಗಳೂರು.